## ಹೋಲಿ ಹಂಸಗಳ ವಿಶೇಷತೆಗಳು

ಇಂದು ಸರ್ವ ಮಕ್ಕಳನ್ನು ವಿಶೇಷ ಆತ್ಮರನ್ನಾಗಿ ಮಾಡುವ ಬಾಪ್ದಾದಾ ಪ್ರತಿಯೊಂದು ಹೋಲಿ ಹಂಸದ ವಿಶೇಷತೆಯನ್ನು ನೋಡುತ್ತಿದ್ದಾರೆ. ಹೇಗೆ ಹಂಸಕ್ಕೆ ನಿರ್ಣಯ ಶಕ್ತಿ ಮತ್ತು ಗುರುತಿಸುವ ಶಕ್ತಿಯು ವಿಶೇಷವಾಗಿರುತ್ತದೆ. ಆದ್ದರಿಂದ ಗ್ರಹಿಸುವ ಶಕ್ತಿಯು ವಿಶೇಷವಾಗಿರುತ್ತದೆ ಅದರ ಆಧಾರದ ಮೇಲೆ ಮುತ್ತು ಮತ್ತು ಕಲ್ಲು ಎರಡನ್ನೂ ಗುರುತಿಸುತ್ತದೆ ಮತ್ತು ನಿರ್ಣಯ ಮಾಡುತ್ತದೆ. ಅದರ ನಂತರ ಮುತ್ತುಗಳನ್ನು ಗ್ರಹಿಸುತ್ತದೆ, ಕಲ್ಲುಗಳನ್ನು ಬಿಟ್ಟು ಬಿಡುತ್ತದೆ ಅಂದಾಗ ಗುರುತಿಸುವುದು, ನಿರ್ಣಯ ಮಾಡುವುದು ಮತ್ತು ಗ್ರಹಿಸುವುದು ಅರ್ಥಾತ್ ಧಾರಣೆ ಮಾಡಿಕೊಳ್ಳುವುದು - ಈ ಮೂರೂ ಶಕ್ತಿಗಳ ವಿಶೇಷತೆಯ ಕಾರಣ ಸಂಗಮಯುಗೀ ಸರಸ್ವತಿ ತಾಯಿಯ ವಾಹನವಾಗಿ ಹಂಸವನ್ನು ತೋರಿಸುತ್ತಾರೆ ಅಂದಾಗ ಕೇವಲ ಒಬ್ಬ ಸರಸ್ವತಿ ತಾಯಿಯ ನೆನಪಾರ್ಥವಲ್ಲ ಆದರೆ ತಾಯಿ ಸಮಾನರಾಗುವಂತಹ ವೀಣಾ ವಾದಿನಿಯರು ತಾವೆಲ್ಲರೂ ಆಗಿದ್ದೀರಿ. ಈ ಜ್ಞಾನವನ್ನು ಧಾರಣೆ ಮಾಡಿಕೊಳ್ಳುವುದಕ್ಕಾಗಿಯೂ ಈ ಮೂರು ವಿಶೇಷತೆಗಳು ಅತ್ಯವಶ್ಯಕವಾಗಿದೆ. ತಾವೆಲ್ಲರೂ ಬ್ರಾಹ್ಮಣ ಜೀವನವನ್ನು ಧಾರಣೆ ಮಾಡಿಕೊಳ್ಳುತ್ತಿದ್ದಂತೆಯೇ ಜ್ಞಾನದ ಮೂಲಕ, ವಿವೇಕದ ಮೂಲಕ ಮೊದಲು ಗುರುತಿಸುವ ಶಕ್ತಿಯ ಆಧಾರವನ್ನು ಅರಿತುಕೊಂಡಿರಿ, ತಮ್ಮನ್ನು ತಾವು ಅರಿತುಕೊಂಡಿರಿ, ಸಮಯವನ್ನು ಅರಿತಿರಿ. ತಮ್ಮ ಬ್ರಾಹ್ಮಣ ಪರಿವಾರವನ್ನು ಅರಿತುಕೊಂಡಿರಿ. ತಮ್ಮ ಶ್ರೇಷ್ಠ ಕರ್ತವ್ಯವನ್ನು ಅರಿತುಕೊಂಡಿರಿ. ಇದರ ನಂತರ ನಿರ್ಣಯ ಮಾಡಿದಿರಿ ಆದ್ದರಿಂದಲೇ ಬ್ರಾಹ್ಮಣ ಜೀವನವನ್ನು ಧಾರಣೆ ಮಾಡಿಕೊಂಡಿದ್ದೀರಿ. ಇವರೇ ಕಲ್ಪದ ಹಿಂದಿನ ಬೇಹದ್ದಿನ ತಂದೆಯಾಗಿದ್ದಾರೆ, ಪರಮಾತ್ಮನಾಗಿದ್ದಾರೆ. ನಾನೂ ಸಹ ಕಲ್ಪದ ಹಿಂದಿನ ಅದೇ ಶ್ರೇಷ್ಠ ಆತ್ಮನಾಗಿದ್ದೇನೆ, ಅಧಿಕಾರಿ ಆತ್ಮನಾಗಿದ್ದೇನೆ. ಇದನ್ನು ಗುರುತಿಸಿದ ನಂತರ ನಿರ್ಣಯ ಮಾಡಿದಿರಿ. ತಂದೆಯನ್ನು ಗುರುತಿಸದೇ ನಿರ್ಣಯ ಮಾಡಲು ಸಾಧ್ಯವಿಲ್ಲ. ಕೆಲವು ಆತ್ಮರು ಇಲ್ಲಿಯವರೆಗೂ ಸಂಬಂಧ-ಸಂಪರ್ಕದಲ್ಲಿದ್ದಾರೆ, ಬಹಳ ಚೆನ್ನಾಗಿದೆ ಬಹಳ ಚೆನ್ನಾಗಿದೆ ಎಂದು ಹೇಳುತ್ತಾ ಇರುತ್ತಾರೆ ಆದರೆ ಪರಮಾತ್ಮನ ಪರಿಚಯ ಹಾಗೂ ಗುರುತಿಸುವ ಶಕ್ತಿಯಿಲ್ಲದೇ ಇರುವ ಕಾರಣ ನಾವು ಏನಾಗಬೇಕು ಮತ್ತು ಏನು ಮಾಡಬೇಕು ಎಂಬುದನ್ನು ನಿರ್ಣಯ ಮಾಡಲು ಆಗುತ್ತಿಲ್ಲ. ಆದ್ದರಿಂದ ಬ್ರಾಹ್ಮಣ ಜೀವನವನ್ನು ಧಾರಣೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಸಹಯೋಗಿಗಳಾಗುತ್ತಾರೆ ಆದರೆ ಸಹಜಯೋಗಿ ಜೀವನವನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಎರಡೂ ಶಕ್ತಿಗಳಿಲ್ಲ ಆದ್ದರಿಂದ ಹೋಲಿ ಹಂಸಗಳಾಗಲು ಸಾಧ್ಯವಿಲ್ಲ. ಪವಿತ್ರತಾ ರೂಪಿ ಮುತ್ತು ಮತ್ತು ಅಪವಿತ್ರತಾ ರೂಪಿ ಕಲ್ಲು ಎರಡನ್ನೂ ಬೇರೆ-ಬೇರೆ ಎಂದು ತಿಳಿದುಕೊಳ್ಳುವುದಿಲ್ಲ. ಆದ್ದರಿಂದ ಪವಿತ್ರತೆಯನ್ನು ಗ್ರಹಿಸುವ ಶಕ್ತಿಯು ಬರಲು ಸಾಧ್ಯವಿಲ್ಲ ಅಂದಾಗ ಹೋಲಿ ಹಂಸದ ವಿಶೇಷತೆಯಾಗಿದೆ- ಮೊದಲ ಶಕ್ತಿ ``ಗುರುತಿಸುವುದು" ಅರ್ಥಾತ್ ಅರಿತುಕೊಳ್ಳುವುದು. ತಾವು ಪವಿತ್ರ ಹಂಸಗಳಲ್ಲಿ ಇವೆರಡೂ ಶಕ್ತಿಗಳು ಇವೆಯಲ್ಲವೆ ಏಕೆಂದರೆ ತಂದೆಯನ್ನು ಅರಿತುಕೊಂಡಿರಿ, ತಮ್ಮನ್ನು ತಾವು ಅರಿತುಕೊಂಡಿರಿ. ಸರಿಯಾದ ನಿರ್ಣಯ ಮಾಡಿದಿರಿ ಆದ್ದರಿಂದಲೇ ಬ್ರಾಹ್ಮಣರಾದಿರಿ ಮತ್ತು ನಡೆಯುತ್ತಿದ್ದೀರಿ. ಈ ಮಾತಿನಲ್ಲಿ ಎಲ್ಲರೂ ಪಕ್ಕಾ ಪಾಸಾಗಿದ್ದೀರಿ. ಆದರೆ ಯಾವ ಸೇವೆ ಮಾಡುತ್ತೀರಿ ಮತ್ತು ಕರ್ಮದಲ್ಲಿ ಬರುತ್ತೀರಿ ಇಡೀ ದಿನದ ದಿನಚರಿಯಲ್ಲಿ ಯಾವ ಕರ್ಮ ಮಾಡುತ್ತೀರೋ ಸಂಬಂಧ-ಸಂಪರ್ಕದಲ್ಲಿ ಬರುತ್ತೀರೋ ಅದರಲ್ಲಿ ಪ್ರತೀಕರ್ಮವು ಸಫಲತಾಪೂರ್ವಕವಾಗಿರಲಿ ಹಾಗೂ ಸಂಪರ್ಕದಲ್ಲಿರುವ ಪ್ರತಿಯೊಂದು ಆತ್ಮನ ಸಂಬಂಧದಲ್ಲಿ ಬರುವುದರಲ್ಲಿ ಸದಾ ಸಫಲತೆಯಿರಲಿ. ಪ್ರತಿಯೊಂದು ಪ್ರಕಾರದ ಸೇವೆ ಅಂದರೆ ಮನಸ್ಸಾ-ವಾಚಾ-ಕರ್ಮಣಾ ಮೂರರಲ್ಲಿಯೂ ಸದಾ ಸಫಲತೆಯ ಅನುಭವವಾಗಲಿ. ಅದಕ್ಕೂ ಆಧಾರ- ಗುರುತಿಸುವ ಶಕ್ತಿ ಮತ್ತು ನಿರ್ಣಯ ಮಾಡುವ ಶಕ್ತಿಯಾಗಿದೆ. ಇದರಲ್ಲಿ ಪೂರ್ಣ ಪಾಸಾಗಿದ್ದೀರಾ? ಸೇವೆಯ ಸಫಲತೆ ಹಾಗೂ ಸಂಪರ್ಕದಲ್ಲಿ ಸಫಲತೆಯು ಸದಾ ಆಗದೇ ಇರುವುದಕ್ಕೆ ಕಾರಣವನ್ನು ಪರಿಶೀಲನೆ ಮಾಡಿಕೊಳ್ಳಿ - ಕಾರ್ಯವನ್ನು, ವ್ಯಕ್ತಿಯನ್ನು, ಆತ್ಮವನ್ನು ಗುರುತಿಸುವ ಶಕ್ತಿಯಲ್ಲಿ ಅಂತರವಾಗಿ ಬಿಡುತ್ತದೆ. ಯಾವ ಆತ್ಮಕ್ಕೆ ಯಾವ ಸಮಯದಲ್ಲಿ ಯಾವ ವಿಧಿಪೂರ್ವಕ ಸಹಯೋಗ ಬೇಕೋ ಅಥವಾ ಶಿಕ್ಷಣ ಬೇಕೋ, ಸ್ನೇಹವು ಬೇಕೋ ಆ ಸಮಯದಲ್ಲಿ ಒಂದುವೇಳೆ ಗುರುತಿಸುವ ಶಕ್ತಿಯು ತೀವ್ರವಾಗಿದ್ದರೆ ಅವಶ್ಯವಾಗಿ ಸಂಬಂಧದಲ್ಲಿ ಸಫಲತೆಯು ಪ್ರಾಪ್ತಿಯಾಗುವುದು ಆದರೆ ಆಗುವುದೇನು? ಯಾವ ಆತ್ಮನಿಗೆ ಯಾವ ಸಹಯೋಗ ಅಥವಾ ವಿಧಿಯು ಆ ಸಮಯದಲ್ಲಿ ಬೇಕು, ಅದನ್ನು ಕೊಡದೆ ಅಥವಾ ಗುರುತಿಸದೇ ಇರುವ ಕಾರಣ ತನ್ನ ರೀತಿಯಿಂದ ಅವರಿಗೆ ಸಹಯೋಗ ಕೊಡುತ್ತೀರಿ, ಅಥವಾ ವಿಧಿಯನ್ನು ಅಳವಡಿಸಿಕೊಳ್ಳುತ್ತೀರಿ ಆದ್ದರಿಂದ ಸಂತುಷ್ಟತೆಯ ಸಫಲತೆಯಾಗುವುದಿಲ್ಲ. ಹೇಗೆ ಶಾರೀರಿಕ ಕಾಯಿಲೆಯನ್ನು ಗುರುತಿಸುವ ವಿಧಿಯೇ ವೈದ್ಯರಿಗೆ ಬರದೇ ಇದ್ದರೆ ಏನಾಗುತ್ತದೆ? ವಾಸಿಯಾಗುವ ಬದಲಾಗಿ ಒಂದರಿಂದ ಅನೇಕ ರೋಗಗಳು ಉಂಟಾಗುತ್ತವೆ. ರೋಗಿಗೆ ಸಂತುಷ್ಟತೆಯಾಗುವ ಸಫಲತೆಯು ಸಿಗುವುದಿಲ್ಲ. ಅದಕ್ಕೆ ಸಾಧಾರಣ ಶಬ್ದಗಳಲ್ಲಿ ಬಾಪ್ದಾದಾ ಹೇಳುತ್ತೇವೆ - ಪ್ರತಿಯೊಬ್ಬರ ನಾಡಿಯನ್ನು ತಿಳಿದುಕೊಳ್ಳಿ. ನಡೆಯುವುದು ಮತ್ತು ನಡೆಸುವುದೂ ಸಹ ಅತ್ಯವಶ್ಯಕವಾಗಿದೆ ಅಂದಾಗ ಏನು ಮಾಡಬೇಕಾಗುವುದು? ತಿಳಿದುಕೊಳ್ಳುವ ಅರ್ಥಾತ್ ಗುರುತಿಸುವ ಶಕ್ತಿಯನ್ನು ತೀವ್ರ ಮಾಡಿಕೊಳ್ಳಬೇಕಾಗಿದೆ. ಇದರಲ್ಲಿ ಅಂತರವಾಗಿ ಬಿಡುತ್ತದೆ. ಅದಕ್ಕೆ ತಾವು ಸಾಧಾರಣ ಭಾಷೆಯಲ್ಲಿ ಹ್ಯಾಂಡ್ಲಿಂಗ್ನ ಕೊರತೆಯೆಂದು ಹೇಳುತ್ತೀರಿ, ಇವರ ಹ್ಯಾಂಡ್ಲಿಂಗ್ ಹಳೆಯದಾಗಿದೆ, ಇವರದು ಹೊಸದಾಗಿದೆ ಎಂದು

ಹೇಳುತ್ತೀರಲ್ಲವೆ. ಈ ಅಂತರ ಏಕೆ ಆಯಿತು? ಏಕೆಂದರೆ ಪ್ರತೀ ಸಮಯ ಪ್ರತಿಯೊಂದು ಆತ್ಮ ಮತ್ತು ಪ್ರತೀ ಕಾರ್ಯವನ್ನು ಗುರುತಿಸುವ ಶಕ್ತಿಯು ಬೇಕು. ಒಟ್ಟಾಗಿ ಗುರುತಿಸುವ ಶಕ್ತಿಯು ಬಂದು ಬಿಟ್ಟಿದೆ ಆದರೆ ವಿಸ್ತಾರದಿಂದ ಇನ್ನೂ ಬೇಹದ್ದಿನ ಗುರುತಿಸುವ ಶಕ್ತಿಯ ಅವಶ್ಯಕತೆಯಿದೆ - ಆ ಸಮಯದಲ್ಲಿ ಆತ್ಮರ ಗ್ರಹಿಸುವ ಶಕ್ತಿಯು ಎಷ್ಟಿದೆ, ವಾಯುಮಂಡಲ ಹೇಗಿದೆ ಮತ್ತು ಆ ಆತ್ಮನು ಕೇಳುವ ಅಥವಾ ಶಿಕ್ಷಣ ತೆಗೆದುಕೊಳ್ಳುವ ಮನೋಸ್ಥಿತಿಯು ಹೇಗೆ ಇದೆ ಎಂದು. ಹೇಗೆ ಯಾರಾದರೂ ನಿರ್ಬಲರಾಗಿದ್ದರೆ ಅವರಿಗೆ ಅತೀ ಹೆಚ್ಚು ತಾಕತ್ತಿನ ಇಂಜೆಕ್ಷನ್ ಕೊಟ್ಟು ಬಿಟ್ಟರೆ ಅವರ ಸ್ಥಿತಿಯೇನಾಗುವುದು? ಪೇಶೆಂಟ್ನ ಬದಲು ಪೆಶೆನ್ಸ್ ಆಗಿಬಿಡುತ್ತದೆ. ಹೃದಯಾಘಾತ ಆಗಿಬಿಡುತ್ತದೆ, ಶಾಂತಿಯಲ್ಲಿ ಹೊರಟು ಹೋಗುತ್ತಾರೆ. ಹಾಗೆಯೇ ಒಂದುವೇಳೆ ಸಂಬಂಧದಲ್ಲಿ ಬರುವಂತಹ ಆತ್ಮನು ನಿರ್ಬಲನಾಗಿದ್ದರೆ ಆತ್ಮದಲ್ಲಿ ಧೈರ್ಯವಿಲ್ಲ. ಆದರೆ ತಾವು ಅವರಿಗೆ ಶಿಕ್ಷಣದ ಡೋಸ್ನ್ನು ಕೊಡುತ್ತಾ ಹೋಗಿ, ಅವರ ಸ್ಥಿತಿ ಸಮಯ ವಾಯುಮಂಡಲವನ್ನು ಗುರುತಿಸಲು ಆಗದಿದ್ದರೆ ಫಲಿತಾಂಶವೇನಾಗುತ್ತದೆ? ಒಂದನೆಯದಾಗಿ, ಹೃದಯ ವಿಧೀರ್ಣರಾಗಿ ಬಿಡುತ್ತಾರೆ ಮತ್ತು ಶಕ್ತಿಯಿಲ್ಲದೇ ಇರುವ ಕಾರಣ ಗ್ರಹಿಸಲು ಸಾಧ್ಯವಾಗುವುದಿಲ್ಲ. ಇನ್ನೂ ಜಿದ್ದು ಮತ್ತು ಸಿದ್ಧ ಮಾಡುವುದರಲ್ಲಿ ಮುಂದೆ ನಿಲ್ಲುತ್ತಾರೆ. ತಾವಂತೂ ಒಳ್ಳೆಯ ಭಾವನೆಯಿಂದ ಮಾಡಿದಿರಿ ಆದರೆ ಸಫಲತೆಯು ಸಿಗದೇ ಇರಲು ಕಾರಣವಾಗಿದೆ - ಗುರುತಿಸುವ ಹಾಗೂ ನಿರ್ಣಯ ಮಾಡುವ ಶಕ್ತಿಯ ಕೊರತೆ ಆದ್ದರಿಂದ ಸಫಲತಾ ಮೂರ್ತಿಗಳಾಗುವುದರಲ್ಲಿ ಪರ್ಸೆಂಟೇಜ್ ಆಗಿ ಬಿಡುತ್ತದೆ. ಅಂದಮೇಲೆ ಇಡೀ ದಿನದ ಕರ್ಮ ಮತ್ತು ಸಂಬಂಧದಲ್ಲಿ ಗುರುತಿಸುವ ಶಕ್ತಿಯ ಅವಶ್ಯಕತೆಯಿದೆ ಅಲ್ಲವೆ. ಆದ್ದರಿಂದ ಭಲೆ ಶಿಕ್ಷಣ ಕೊಡಿ ಆದರೆ ಎಲ್ಲಾ ಮಾತುಗಳನ್ನು ಗುರುತಿಸಿ ನಂತರ ಹೆಜ್ಜೆಯನ್ನು ಇಡಿ. ಹಾಗೆಯೇ ಸೇವಾಕ್ಷೇತ್ರದಲ್ಲಿಯೂ ಒಂದುವೇಳೆ ಆತ್ಮರ ಅವಶ್ಯಕತೆ ಮತ್ತು ಇಚ್ಛೆಯನ್ನು ಗುರುತಿಸದೆ ನೀವು ಎಷ್ಟಾದರೂ ಒಳ್ಳೆಯ ಜ್ಞಾನವನ್ನು ಕೊಡಿ, ಎಷ್ಟೇ ಪರಿಶ್ರಮ ಪಡಿ ಆದರೆ ಸಫಲತೆಯಾಗುವುದಿಲ್ಲ. ``ಚೆನ್ನಾಗಿದೆ-ಚೆನ್ನಾಗಿದೆ'' ಎಂದು ಹೇಳುವುದಂತೂ ಒಂದು ಪದ್ಧತಿಯಾಗಿ ಬಿಟ್ಟಿದೆ ಏಕೆಂದರೆ ತಾವು ಯಾವುದೇ ಕೆಟ್ಟ ಮಾತನ್ನಂತೂ ಹೇಳುವುದಿಲ್ಲ. ಆದರೆ ಯಾವ ಸಫಲತೆಯ ಲಕ್ಷ್ಯವನ್ನು ಇಟ್ಟುಕೊಳ್ಳುತ್ತೀರಿ ಅದರಲ್ಲಿ ಸಮೀಪ ಅನುಭವ ಮಾಡಿರಿ. ಅದಕ್ಕಾಗಿ ಗುರುತಿಸುವ ಶಕ್ತಿಯು ಅತ್ಯವಶ್ಯಕವಾಗಿದೆ. ಹೇಗೆ ಯಾರಾದರೂ ಮುಕ್ತಿಯು ಇಚ್ಛುಕರಾಗಿದ್ದಾರೆ ಮತ್ತು ಅವರಿಗೆ ತಾವು ಮುಕ್ತಿ-ಜೀವನ್ಮುಕ್ತಿ ಎರಡನ್ನೂ ಕೊಟ್ಟರೂ ಸಹ ಅವರಿಗೆ ರುಚಿಯಿರುವುದಿಲ್ಲ. ನೀರಿಗೆ ಬಾಯಾರಿದವರಿಗೆ 36 ಪ್ರಕಾರದ ಭೋಜನವನ್ನೇ ಕೊಡಿ ಆದರೆ ಅವರು ನೀರಿನಿಂದಲೇ ಸಂತುಷ್ಟರಾಗುವರೇ ಹೊರತು ಭೋಜನದಿಂದಲ್ಲ. ಹಾಗೆಯೇ ಮುಕ್ತಿಯ ಇಚ್ಛುಕರನ್ನು ಗುರುತಿಸಿ ಒಂದುವೇಳೆ ಅವರಿಗೆ ಮುಕ್ತಿಯ ಬಗ್ಗೆ ಸ್ಪಷ್ಟೀಕರಣ ನೀಡುತ್ತೀರೆಂದರೆ ಅವರ ಇಚ್ಛೆಯೂ ಹೆಚ್ಚು ಮತ್ತು ಜೀವನ್ಮುಕ್ತಿಯಲ್ಲಿ ಪರಿವರ್ತನೆಯೂ ಆಗಿ ಬಿಡುತ್ತಾರೆ. ಕೆಲವರಿಗೆ ಧಾರಣೆಯ ಮಾತುಗಳನ್ನು ಕೇಳಲು ಇಷ್ಟವಾಗುತ್ತದೆ, ಅವರಿಗೆ ತಾವು ಕಲ್ಪ 5000 ವರ್ಷಗಳು ಹಾಗೂ ಗೀತೆಯ ಭಗವಂತನು ಯಾರು, ಇದನ್ನು ತಿಳಿಸಲು ಆರಂಭಿಸುತ್ತೀರೆಂದರೆ ಅವರ ಆಸಕ್ತಿಯು ಇನ್ನೂ ಸಮಾಪ್ತಿಯಾಗಿ ಬಿಡುತ್ತದೆ. ಆದ್ದರಿಂದ ಸೇವೆಯಲ್ಲಿಯೂ ಆತ್ಮದ ಸ್ಥಿತಿ ಹಾಗೂ ಅವರ ನಂಬಿಕೆ ಏನಾಗಿದೆ? ಅದನ್ನು ಗುರುತಿಸುವುದು ಅವಶ್ಯಕವಾಗಿದೆ ಅಂದಮೇಲೆ ಸಫಲತೆಯ ಆಧಾರವು ಯಾವ ಶಕ್ತಿಯ ಮೇಲೆ ಇದೆ? ಗುರುತಿಸುವ ಶಕ್ತಿ ಬೇಕು. ಅಜ್ಞಾನಿ ಆತ್ಮರ ಸೇವೆಯಿರಬಹುದು, ಸೇವಾ ಜೊತೆಗಾರರ ಸೇವೆಯಿರಬಹುದು. ಎರಡರಲ್ಲಿ ಸಫಲತೆಗೆ ಆಧಾರವು ಒಂದೇ ಆಗಿದೆ ಅಂದಾಗ ಪವಿತ್ರ ಹಂಸದ ವಿಶೇಷತೆ - ಎಲ್ಲದಕ್ಕಿಂತ ಮೊದಲು ಗುರುತಿಸುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ. ಗುರುತಿಸುವ ಶಕ್ತಿಯು ಯಥಾರ್ಥವಾಗಿದೆ, ಶ್ರೇಷ್ಠವಾಗಿದೆ ಎಂದರೆ ನಿರ್ಣಯವೂ ಯಥಾರ್ಥವಾಗಿರುವುದು ಮತ್ತು ತಾವು ಯಾರಿಗೆ ಏನನ್ನು ಕೊಡಬಯಸುತ್ತೀರೋ ಅದು ಅವರಲ್ಲಿ ಗ್ರಹಿಸುವ ಶಕ್ತಿಯು ಸ್ವತಹ ಇರುವುದು ಮತ್ತು ಏನಾಗುವರು? ನಂಬರ್ವನ್ ಸಫಲತಾ ಮೂರ್ತಿಗಳು ಆದ್ದರಿಂದ ಸೇವೆಯಲ್ಲಿರಲಿ, ಸಂಬಂಧದಲ್ಲಿರಲಿ ಲಕ್ಷ್ಯವನ್ನು ಪ್ರಾಪ್ತಿ ಮಾಡಿಕೊಳ್ಳಲು ಈ ಲಕ್ಷಣವನ್ನು ಧಾರಣೆ ಮಾಡಿಕೊಳ್ಳಿ.

ಇಡೀ ದಿನದಲ್ಲಿ ಪರಿಶೀಲನೆ ಮಾಡಿಕೊಳ್ಳಿ - ಇಡೀ ದಿನದ ದಿನಚರಿಯನ್ನು ಗುರುತಿಸುವ ಶಕ್ತಿಯು ಎಲ್ಲಿಯವರೆಗೆ ಯಥಾರ್ಥವಾಗಿದೆ ಮತ್ತು ಎಲ್ಲಿ ತಿದ್ದು ಪಡಿ ಮಾಡುವ ಮತ್ತು ಅಳವಡಿಸಿಕೊಳ್ಳುವ ಅವಶ್ಯಕತೆಯಿತ್ತು? ಮಾಡಿದ ನಂತರ ತಿದ್ದು ಪಡಿ ತನಗೆ ತಾನೇ ಆಗುತ್ತದೆ ಏಕೆಂದರೆ ದಿವ್ಯ ಬುದ್ಧಿಯ ವರದಾನವು ಎಲ್ಲರಿಗೂ ಸಿಕ್ಕಿದೆ. ಭಲೆ ಸಮಸ್ಯೆಗೆ ವಶರಾಗಿ, ಸಮಯ ಹಾಗೂ ಪರಿಸ್ಥಿತಿಗಳಿಗೆ ವಶರಾಗಿ ಮತ್ತು ಯಾವುದೇ ಆತ್ಮರ ಸಂಗಕ್ಕೆ ವಶರಾಗಿ, ಇಲ್ಲವೆ ಮಾಯೆಯ ಮನಮತಕ್ಕೆ ವಶರಾಗಿ ಆ ಸಮಯದಲ್ಲಿ ಪರವಶರಾಗಿ ಬಿಡುತ್ತೀರಿ. ಆದರೆ ಸಮಯ, ಪರಿಸ್ಥಿತಿ, ಸಂಗದ ಪ್ರಭಾವ, ಮನಮತದ ಪ್ರಭಾವವು ಹಗುರವಾದ ಮೇಲೆ ಮತ್ತೆ ತನ್ನ ದಿವ್ಯಬುದ್ಧಿಯು ಕೆಲಸ ಮಾಡುತ್ತದೆ. ಅದಕ್ಕೆ ತಾವು ಹೇಳುತ್ತೀರಿ - ಆವೇಶದಿಂದ ಮತ್ತೆ ಜಾಗೃತ ಅವಸ್ಥೆಯಲ್ಲಿ ಬಂದು ಬಿಟ್ಟೆವು. ನಂತರ ಅನುಭವವಾಗುತ್ತದೆ - ನಮ್ಮಲ್ಲಿ ಇದನ್ನು ಪರಿವರ್ತನೆ ಮಾಡಿಕೊಳ್ಳಬೇಕು ಮತ್ತು ಅಳವಡಿಸಿಕೊಳ್ಳಬೇಕಾಗಿತ್ತು ಅಥವಾ ಮಾಡಿಕೊಳ್ಳಬೇಕಾಗಿದೆ ಎಂದು. ಆದರೆ ರಿಜಿಸ್ಟರ್ನಲ್ಲಿ ಅಥವಾ ಕರ್ಮ ಲೆಕ್ಕಾಚಾರಗಳ ಪುಸ್ತಕದಲ್ಲಿ ದೊಡ್ಡ ಕಲೆಯೇನಲ್ಲ ಆದರೆ ಚುಕ್ಕೆಯಂತೂ ಬಿದ್ದಿತು. ಅದೂ ಸಹ ಸಂಪೂರ್ಣ ಸ್ವಚ್ಛವಾಗಿರುವಂತೆ ಕಾಣುವುದಿಲ್ಲ ಅಲ್ಲವೆ. ಆದ್ದರಿಂದಲೇ ಹೇಳಲಾಗುತ್ತದೆ - ಕರ್ಮಗಳ ಲೀಲೆಯು ಅತಿ ಗುಹ್ಯವಾಗಿದೆ.

ಟೀಚರ್ಸ್ ಕರ್ಮಗಳ ಲೀಲೆಯನ್ನು ಚೆನ್ನಾಗಿ ಅರಿತುಕೊಂಡಿದ್ದೀರಲ್ಲವೆ. ನಿಮಿತ್ತ ಶಿಕ್ಷಕಿಯರು ಇಡೀ ದಿನ ಯಾವ ಗೀತೆಯನ್ನು ಹಾಡುತ್ತೀರಿ - ``ವಾಹ್ ನನ್ನ ಶ್ರೇಷ್ಠ ಕರ್ಮಗಳ ಲೀಲೆಯೇ ವಾಹ್'' ಕರ್ಮಗಳ ಗುಹ್ಯಗತಿಯ ಲೀಲೆಯಲ್ಲ, ಶ್ರೇಷ್ಠ ಕರ್ಮಗಳ ಲೀಲೆ. ಪ್ರಪಂಚದವರು ಪ್ರತೀ ಕರ್ಮದಲ್ಲಿ, ಪ್ರತೀ ಹೆಜ್ಜೆಯಲ್ಲಿ ಕರ್ಮಗಳನ್ನೇ ಕುಟುಕುತ್ತಿರುತ್ತಾರೆ, ಅಯ್ಯೋ ನನ್ನ ಕರ್ಮವೇ ಎಂದು. ಮತ್ತು

ತಾವು ಹೇಳುತ್ತೀರಿ - ``ವಾಹ್ ನನ್ನ ಶ್ರೇಷ್ಠ ಕರ್ಮವೇ'' ಈಗ ಇದರಲ್ಲಿ ಇನ್ನೂ ಮುಂದುವರೆಯಿರಿ - ಸದಾ ``ವಾಹ್ ಶ್ರೇಷ್ಠ ಕರ್ಮ'' ಆಗಿರಲಿ, ಸಾಧಾರಣ ಕರ್ಮವಲ್ಲ. ಕರ್ಮಗಳು ಕುಟುಕುವುದಂತೂ ಸಮಾಪ್ತಿಯಾಯಿತು ಆದರೆ ಸದಾ ಶ್ರೇಷ್ಠ ಕರ್ಮವೇ ಇರಲಿ, ಇದರಲ್ಲಿ ಅಂಡರ್ಲೈನ್ ಮಾಡಿಕೊಳ್ಳಿ. ಒಂದುವೇಳೆ ಮಿಕ್ಸ್ ಕರ್ಮವಾಗಿದ್ದರೆ- ಸಾಧಾರಣವೂ ಇದೆ, ಶ್ರೇಷ್ಠವೂ ಇದೆಯೆಂದರೆ ಸಫಲತೆಯು ಮಿಕ್ಸ್ ಆಗಿ ಬಿಡುತ್ತದೆ. ಈಗ ವಿಶೇಷವಾಗಿ ಈ ಗಮನ ಕೊಡಬೇಕಾಗಿದೆ - ಸಾಧಾರಣತೆಯನ್ನು ವಿಶೇಷತೆಯಲ್ಲಿ ಪರಿವರ್ತನೆ ಮಾಡಿಕೊಳ್ಳಿ. ಇದರ ಮೇಲೂ ಮತ್ತೆಂದಾದರೂ ತಿಳಿಸುತ್ತೇವೆ - ಬಾಪ್ದಾದಾ ಪ್ರತಿಯೊಬ್ಬರ ಪ್ರತಿನಿತ್ಯದ ದಿನಚರಿಯಲ್ಲಿ ಏನೇನನ್ನು ನೋಡುತ್ತೇವೆ? ಸಾಧಾರಣತೆ ಎಷ್ಟಿದೆ ಮತ್ತು ವಿಶೇಷತೆಯು ಎಷ್ಟಿದೆ? ಈ ಫಲಿತಾಂಶವನ್ನು ನೋಡುತ್ತಿರುತ್ತೇವೆ.

ಬಾಪ್ದಾದಾರವರ ಬಳಿ ನೋಡುವ ಸಾಧನಗಳು ಎಷ್ಟಿವೆಯೆಂದರೆ ಒಂದೇ ಸಮಯದಲ್ಲಿ ದೇಶ-ವಿದೇಶದ ಎಲ್ಲಾ ಮಕ್ಕಳನ್ನೂ ನೋಡಬಲ್ಲೆವು. ಬೇರೆ-ಬೇರೆಯಾಗಿ ನೋಡುವ ಅವಶ್ಯಕತೆಯಿಲ್ಲ. ಐದು ನಿಮಿಷಗಳಲ್ಲಿ ಎಲ್ಲರ ಬಗ್ಗೆ ಗೊತ್ತಾಗಿ ಬಿಡುತ್ತದೆ. ಮಕ್ಕಳ ``ವಾಹ್-ವಾಹ್''ನ ಗೀತೆಯನ್ನೂ ಹಾಡುತ್ತೇವೆ, ಜೊತೆ ಜೊತೆಗೆ ಸಮಾನರಾಗುವ ಉದ್ದೇಶದಿಂದ ಪರಿಶೀಲನೆಯನ್ನೂ ಮಾಡುತ್ತೇವೆ. ಮೊದಲೇ ತಿಳಿಸಿದ್ದೇವೆ - ತಂದೆಯ ಸ್ನೇಹ ಹಾಗೂ ತಂದೆಯನ್ನು ಗುರುತಿಸುವುದರಲ್ಲಿ ಎಲ್ಲರೂ ಉತ್ತೀರ್ಣರಾಗಿದ್ದೀರಿ ಮತ್ತು ಕೆಲಕೆಲವೊಮ್ಮೆ ಕಮಾಲ್ನ ಕೆಲಸವನ್ನೂ ಮಾಡುತ್ತೀರಿ. ಒಳ್ಳೆಯ ಕಮಾಲ್ ಆಗಿದೆ, ಧಮಾಲ್ನ ಕಮಾಲ್ ಅಲ್ಲ. ಕೆಲಕೆಲವು ಮಕ್ಕಳು ಧಮಾಲ್(ದಬ್ಬಾಳಿಕೆ) ನ ಕಮಾಲ್ ಮಾಡುತ್ತಾರಲ್ಲವೆ. ಆಗುವುದು ಧಮಾಲ್ ಆದರೆ ಇದು ನಮ್ಮ ಕಮಾಲ್ ಆಗಿದೆ ಎಂದು ಹೇಳುತ್ತಾರೆ. ಆದ್ದರಿಂದ ಬಾಪ್ದಾದಾ ಹೇಳುತ್ತೇವೆ - ಗುರುತಿಸುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ. ತಮ್ಮ ಕರ್ಮಗಳನ್ನು ಗುರುತಿಸಬಲ್ಲಿರಿ, ಮತ್ತು ಅನ್ಯರ ಕರ್ಮಗಳನ್ನೂ ಯಥಾರ್ಥವಾಗಿ ಗುರುತಿಸಬಹುದು. ಉಲ್ಟಾ ಕರ್ಮವನ್ನು ಸುಲ್ಟಾ ಎಂದು ಹೇಳುವುದಿಲ್ಲ. ಇದು ಗುರುತಿಸುವ ಶಕ್ತಿಯ ಕೊರತೆಯಾಗಿದೆ ಮತ್ತು ಸದಾ ಒಂದು ಮಾತನ್ನು ನೆನಪಿಟ್ಟುಕೊಳ್ಳಿ, ಇದನ್ನು ಎಲ್ಲರಿಗಾಗಿ ಹೇಳುತ್ತಿದ್ದೇವೆ - ಎಂದೂ ಯಾವುದೇ ಇಂತಹ ವ್ಯರ್ಥ ಅಥವಾ ಸಾಧಾರಣ ಕರ್ಮ ಮಾಡುತ್ತೀರಿ ಮತ್ತು ತನ್ನನ್ನು ತಮಗೆ ತಾವು ಇದು ಸರಿಯೇ ಅಥವಾ ತಪ್ಪೇ ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲವೋ, ಯಾವಾಗ ಇಂತಹ ಪರಿಸ್ಥಿತಿ ಬರುತ್ತದೆಯೋ, ವಶೀಭೂತರಾಗಿ ಬಿಡುತ್ತೀರೋ ಆ ಸಮಯದಲ್ಲಿ ಇಂತಹ ಪರಿಸ್ಥಿತಿಯಲ್ಲಿ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುವ ಶ್ರೇಷ್ಠ ವಿಧಿ ಯಾವುದಾಗಿದೆ? ಏಕೆಂದರೆ ಆ ಸಮಯದಲ್ಲಿ ತಮ್ಮ ಬುದ್ಧಿಯಂತೂ ವಶೀಭೂತವಾಗಿದೆ. ಸರಿಯನ್ನು ತಪ್ಪೆಂದು ತಿಳಿದುಕೊಳ್ಳುತ್ತೀರಿ, ತಪ್ಪನ್ನು ತಪ್ಪು ಎಂದು ತಿಳಿದುಕೊಳ್ಳುವುದಿಲ್ಲ. ಸರಿಯೆಂದು ತಿಳಿಯುತ್ತೀರಿ ನಂತರ ಜಿದ್ದು ಮಾಡುತ್ತೀರಿ, ಇಲ್ಲವೆ ಸಿದ್ಧ ಮಾಡುತ್ತೀರಿ, ಇದು ವಶೀಭೂತ ಬುದ್ಧಿಯ ಚಿಹ್ನೆಯಾಗಿದೆ. ಇಂತಹ ಸಮಯದಲ್ಲಿ ಸದಾ ಒಬ್ಬ ಬಾಪ್ದಾದಾರವರ ಶ್ರೇಷ್ಠ ಮತವನ್ನು ನೆನಪಿಟ್ಟುಕೊಳ್ಳಿ - ಯಾರನ್ನು ತಂದೆಯು ನಿಮಿತ್ತ ಮಾಡಿದ್ದಾರೆಯೋ ಆ ನಿಮಿತ್ತ ಆತ್ಮರು ಯಾವ ಸಲಹೆಯನ್ನು ಕೊಡುತ್ತಾರೆಯೋ ಅದಕ್ಕೆ ಮಹತ್ವಿಕೆ ಕೊಡಬೇಕು. ಆ ಸಮಯದಲ್ಲಿ ನಿಮಿತ್ತರಾಗಿರುವವರು ಭಹುಷಃ ಯಾರ ಮಾತನ್ನೋ ಕೇಳಿ ಈ ರೀತಿ ಹೇಳುತ್ತಿದ್ದಾರೆಂದು ತಿಳಿಯಬೇಡಿ, ಇದರಲ್ಲಿ ಮೋಸ ಹೋಗುತ್ತೀರಿ. ನಿಮಿತ್ತರಾಗಿರುವ ಶ್ರೇಷ್ಠ ಆತ್ಮರ ಮೂಲಕ ಯಾವ ಶಿಕ್ಷಣ ಅಥವಾ ಸಲಹೆ ಸಿಗುತ್ತದೆಯೋ ಅದಕ್ಕೆ ಆ ಸಮಯದಲ್ಲಿ ಮಹತ್ವಿಕೆ ನೀಡುವುದರಿಂದ ಒಂದುವೇಳೆ ಏನೇ ಕೆಟ್ಟದ್ದಾದರೂ ಸಹ ತಾವು ಜವಾಬ್ದಾರರಲ್ಲ. ಹೇಗೆ ಬ್ರಹ್ಮಾ ತಂದೆಗಾಗಿ ಸದಾ ಹೇಳುತ್ತೇವೆ - ಒಂದುವೇಳೆ ಈ ಬ್ರಹ್ಮಾರವರ ಮೂಲಕ ಯಾವುದೇ ತಪ್ಪಾದರೂ ಸಹ ಆ ತಪ್ಪು ಬದಲಾಗಿ ತಮ್ಮ ಪ್ರತಿ ಅದು ಸರಿಯಾಗುವುದು ಹಾಗೆಯೇ ನಿಮಿತ್ತರಾಗಿರುವ ಆತ್ಮರ ಪ್ರತಿ ಎಂದೂ ಈ ವ್ಯರ್ಥ ಸಂಕಲ್ಪ ಬರಬಾರದು. ತಿಳಿದುಕೊಳ್ಳಿ, ಯಾವುದೇ ಅಂತಹ ನಿರ್ಣಯವನ್ನು ನಿಮಿತ್ತರು ಕೊಡುತ್ತಾರೆ ಅದು ತಮಗೆ ಸರಿಯೆನಿಸುವುದಿಲ್ಲ ಆದರೆ ಅದರಲ್ಲಿ ತಾವು ಜವಾಬ್ದಾರರಲ್ಲ, ತಮ್ಮದು ಪಾಪವಾಗುವುದಿಲ್ಲ. ತಮ್ಮ ಕಾರ್ಯವು ಸರಿ ಹೋಗುವುದು ಏಕೆಂದರೆ ತಂದೆಯು ಕುಳಿತಿದ್ದಾರೆ. ತಂದೆಯು ಪಾಪವನ್ನೂ ಸಹ ಬದಲಾಯಿಸಿ ಬಿಡುವರು. ಇದು ಗುಹ್ಯ ರಹಸ್ಯವಾಗಿದೆ. ಗುಪ್ತ ಮೆಷಿನರಿಯಾಗಿದೆ. ಆದ್ದರಿಂದ ನಿಮಿತ್ತರಾಗಿರುವ ಶ್ರೇಷ್ಠ ಆತ್ಮರ ಶ್ರೇಷ್ಠ ಸಲಹೆಯನ್ನು ಮಹತ್ವಿಕೆಯಿಂದ ಕಾರ್ಯದಲ್ಲಿ ತೊಡಗಿಸಿರಿ. ಇದರಲ್ಲಿ ತಮ್ಮದೇ ಲಾಭವಿದೆ. ನಷ್ಟವೂ ಸಹ ಲಾಭದಲ್ಲಿ ಪರಿವರ್ತನೆಯಾಗುವುದು. ಇದು ತಂದೆಯ ಗ್ಯಾರಂಟಿಯಾಗಿದೆ. ತಿಳಿಯಿತೆ? ಆದ್ದರಿಂದ ತಿಳಿಸಿದೆವು - ಕರ್ಮಗಳ ಲೀಲೆಯು ಬಹಳ ವಿಚಿತ್ರವಾಗಿದೆ. ತಂದೆಯು ಜವಾಬ್ದಾರನಾಗಿದ್ದಾರೆ. ಯಾರನ್ನೂ ನಿಮಿತ್ತರನ್ನಾಗಿ ಮಾಡಿದ್ದಾರೆಯೋ ಅವರಿಗೂ ತಂದೆಯೇ ಜವಾಬ್ದಾರರಾಗಿದ್ದಾರೆ. ತಮ್ಮ ಪಾಪವನ್ನು ಬದಲಾಯಿಸುವುದಕ್ಕೂ ಜವಾಬ್ದಾರರಾಗಿದ್ದೇವೆ. ಕೇವಲ ಹಾಗೆಯೇ ನಿಮಿತ್ತ ಮಾಡಲಿಲ್ಲ, ಯೋಚಿಸಿ ಅರಿತುಕೊಂಡು ಡ್ರಾಮಾದ ನಿಯಮನುಸಾರ ನಿಮಿತ್ತರನ್ನಾಗಿ ಮಾಡಲಾಗಿದೆ. ತಿಳಿಯಿತೆ!

ನಿಮಿತ್ತ ಸಹೋದರಿಯರಿಗೆ ಇದು ಇಷ್ಟವಾಗುತ್ತದೆಯಲ್ಲವೆ. ಇದರಲ್ಲಿ ಲಾಭವಿದೆ, ಹೊರೆಯು ಹಗುರವಾಯಿತು. ಯಾವುದೇ ಮಾತು ಬಂದರೆ ನಿಮಿತ್ತರಾಗಿರುವ ಹಿರಿಯರಿಗೆ ಗೊತ್ತು ಎಂದು ಹೇಳುತ್ತೀರಿ, ಹಗುರರಾಗಿ ಬಿಟ್ಟಿರಿ ಅಲ್ಲವೆ. ಆದರೆ ಕೇವಲ ಹೇಳಿಕೆಗೆ ಮಾತ್ರವಲ್ಲ, ತಿಳಿದುಕೊಳ್ಳುವುದಕ್ಕಾಗಿ ಸ್ನೇಹ ಮಾತ್ರ, ಸ್ವಮಾನ ಮಾತ್ರವಾಗಿರಲಿ. ಈ ಗುಹ್ಯ ಮಾತುಗಳು ತಂದೆಗೆ ಗೊತ್ತು ಮತ್ತು ಯಾರು ಬುದ್ಧಿವಂತ ಮಕ್ಕಳಿದ್ದಾರೆಯೋ ಅವರಿಗೆ ಗೊತ್ತಿದೆ. ನಿಮಿತ್ತರಾಗಿರುವ ಆತ್ಮರ ಪ್ರತಿ ಏನಾದರೂ ಮಾತನಾಡುವುದು ಎಂದರೆ ತಂದೆಯ ಪ್ರತಿ ಮಾತನಾಡುವುದು. ತಂದೆಯು ನಿಮಿತ್ತರನ್ನಾಗಿ ಮಾಡಿದ್ದಾರಲ್ಲವೆ. ತಮಗೆ

ತಂದೆಗಿಂತಲೂ ಹೆಚ್ಚು ಗುರುತಿಸುವ ಶಕ್ತಿಯಿದೆಯೇ?

ಬಾಪ್ದಾದಾರವರಿಗೆ ಎಲ್ಲಾ ಮಕ್ಕಳೊಂದಿಗೆ ಅತೀ ಸ್ನೇಹವಿದೆ. ಕೇವಲ ನಿಮಿತ್ತ ಆಗಿರುವವರೊಂದಿಗೆ ಪ್ರೀತಿಯಿದೆ, ಅನ್ಯರೊಂದಿಗೆ ಇಲ್ಲವೆಂದಲ್ಲ. ಇದೂ ಸಹ ಪ್ರೀತಿಯ ಕಾರಣವೇ ಸಲಹೆ ಕೊಡುತ್ತಿದ್ದೇವೆ. ಪ್ರೀತಿಯಿಲ್ಲದೇ ಹೋಗಿದ್ದರೆ ಹೇಗೆ ನಡೆಯುತ್ತಿದ್ದಾರೆಯೋ ಹಾಗೆಯೇ ನಡೆಯುತ್ತಿರಲಿ. ನಮಗೇನು ಎಂದು ಹೇಳಬಹುದಾಗಿತ್ತು. ಯಾವಾಗ ಇಷ್ಟೊಂದು ಸಾಹಸವನ್ನು ಇಟ್ಟಿದ್ದೀರಿ ಮತ್ತು ಬ್ರಾಹ್ಮಣ ಜೀವನದಲ್ಲಿ ನಡೆಯುತ್ತಿದ್ದೀರಿ, ಹಾರುತ್ತಿದ್ದೀರಿ ಅಂದಮೇಲೆ ಚಿಕ್ಕ ಬಲಹೀನತೆಯೂ ಏಕೆ ಉಳಿಯಬೇಕು? ಇದು ಪ್ರೀತಿಯಾಗಿದೆ. ಪ್ರೀತಿಯಿರುವವರ ಕೊರತೆಯನ್ನು ಎಂದೂ ನೋಡಲು ಸಾಧ್ಯವಾಗುವುದಿಲ್ಲ. ಇದು ಪ್ರೀತಿಯ ಸಂಕೇತವಾಗಿದೆ. ಯಾರೊಂದಿಗೆ ಹೃದಯದ ಸತ್ಯ ಪ್ರೀತಿಯಿರುವುದೋ ಅವರ ಕೊರತೆಯನ್ನು ಸದಾ ತನ್ನ ಕೊರತೆಯೆಂದು ತಿಳಿಯುತ್ತಾರೆ. ಒಳ್ಳೆಯದು.

ಯಾವುದೇ ಕಾರ್ಯ ಮಾಡುತ್ತೀರೆಂದರೆ ಎಂದೂ ಯಾವುದೇ ಏರುಪೇರಿನ ವಾತಾವರಣದ ಪ್ರಭಾವದಲ್ಲಿ ಬರಬೇಡಿ, ತಮ್ಮ ಪ್ರಭಾವವನ್ನು ಬೀರಿದಾಗ ಅವರು ತಮ್ಮ ಪ್ರಭಾವದಲ್ಲಿ ಬಂದು ಬಿಡುತ್ತಾರೆ ಮತ್ತು ಹೃದಯದಿಂದ ಇದೇ ಹೊರಬರುವುದು - ಸಫಲತೆಯು ನಮ್ಮ ಜನ್ಮ ಸಿದ್ಧ ಅಧಿಕಾರವಾಗಿದೆ. ಧೈರ್ಯಕ್ಕೆ ಬಹಳ ಮಹತ್ವಿಕೆಯಿದೆ. ಎಂದೂ ಯಾವುದೇ ಮಾತಿನಲ್ಲಿ ಗಾಬರಿಯಾಗಬೇಡಿ. ತಾವೂ ಸಹ ಸಾವಿರ ಭುಜಧಾರಿ ಆಗಿದ್ದೀರಿ. ತಂದೆಯ ಸಾವಿರ ಭುಜಗಳು ತಮ್ಮದೂ ಆಯಿತಲ್ಲವೆ. ಒಳ್ಳೆಯದು.

ನಾಲ್ಕಾರು ಕಡೆಯ ಸದಾ ಗುರುತಿಸುವ ಶಕ್ತಿಯ ವಿಶೇಷ ಆತ್ಮರಿಗೆ, ಸದಾ ಪ್ರತೀ ಕರ್ಮ ಮತ್ತು ಸಂಬಂಧದಲ್ಲಿ ಶ್ರೇಷ್ಠ ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ಸಫಲತಾಮೂರ್ತಿ ಆತ್ಮಗಳಿಗೆ, ಸದಾ ಧೈರ್ಯ ಹಾಗೂ ಶುಭಭಾವನೆ-ಶುಭಕಾಮನೆಯ ಮೂಲಕ ಪರಿವರ್ತನೆ ಮಾಡುವಂತಹ ಶಕ್ತಿಶಾಲಿ ಆತ್ಮರಿಗೆ, ಸದಾ ``ವಾಹ್ ನನ್ನ ಶ್ರೇಷ್ಠ ಕರ್ಮವೇ'' ಎಂಬ ಖುಷಿಯ ಗೀತೆಯನ್ನು ಹಾಡುವಂತಹ ಮಕ್ಕಳಿಗೆ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.

ವರದಾನ: ವರದಾನ: ಶಾಂತಿಯ ಶಕ್ತಿಯಿಂದ, ಸಂಸ್ಕಾರ ಮಿಲನದ ಮೂಲಕ ಸರ್ವ ಕಾರ್ಯಗಳನ್ನು ಸಫಲಗೊಳಿಸುವಂತಹ ಸದಾ ನಿರ್ವಿಘ್ನ ಭವ.

ಯಾರು ಸೀ ಫಾದರ್, ಫಾಲೋ ಫಾದರ್ ಮಾಡುವರೋ ಅವರೇ ಸದಾ ನಿರ್ವಿಘ್ನರಾಗಿರಲು ಸಾಧ್ಯ. ಸೀ ಸಿಸ್ಟರ್, ಸೀ ಬ್ರದರ್ ಮಾಡುವುದರಿಂದ ಏರುಪೇರುಂಟಾಗುತ್ತದೆ. ಆದ್ದರಿಂದ ಈಗ ತಂದೆಯನ್ನು ಅನುಕರಣೆ ಮಾಡುತ್ತಾ, ತಂದೆಯ ಸಮಾನ ಸಂಸ್ಕಾರವನ್ನಾಗಿ ಮಾಡಿಕೊಳ್ಳುತ್ತೀರೆಂದರೆ ಸಂಸ್ಕಾರ ಮಿಲನದ ರಾಸ್ ಮಾಡುತ್ತಾ, ಸದಾ ನಿರ್ವಿಘ್ನವಾಗಿರುತ್ತೀರಿ. ಶಾಂತಿಯ ಶಕ್ತಿಯಿಂದ ಅಥವಾ ಶಾಂತವಾಗಿರುವುದರಿಂದ ಎಂತಹ ದೊಡ್ಡ ವಿಘ್ನವು ಸಹಜವಾಗಿಯೇ ಸಮಾಪ್ತಿಯಾಗಿ ಬಿಡುವುದು ಹಾಗೂ ಸರ್ವ ಕಾರ್ಯಗಳೂ ಸಹ ಸ್ವತಹವಾಗಿಯೇ ಸಂಪನ್ನವಾಗಿ ಬಿಡುವುದು.

ಸ್ಲೋಗನ್: ಸ್ಲೋಗನ್: ಯಾರು ಯಾವುದೇ ಮಾತನ್ನು ಒಂದು ಕಾಲದ ದೃಷ್ಟಿಯಿಂದ ನೋಡುವುದಿಲ್ಲ, ಪ್ರತೀ ಮಾತಿನಲ್ಲಿ ಕಲ್ಯಾಣವೆಂದು ತಿಳಿಯುವವರೋ ಅವರೇ ತ್ರಿಕಾಲದರ್ಶಿ ಆಗಿದ್ದಾರೆ.